

# ‘ಸಾಮರ್ಥ್ಯ ಪರೀಕ್ಷೆ’ಯಲ್ಲಿ ಗಗನಾ

ಚಂದನವನದ ಹೊಸ ಪ್ರತಿಭೆ ಗಗನ ಮಧು ಅವರು ತಮ್ಮ ಸಾಮರ್ಥ್ಯ ಪರೀಕ್ಷೆಗೆ ಇಳಿದಿದ್ದಾರೆ. ಬಣ್ಣದ ಲೋಕಕ್ಕೆ ಬಂದವರೆಲ್ಲರೂ ಸಾಮರ್ಥ್ಯಪರೀಕ್ಷೆಗೆ ಒಳಗಾಗಲೇಬೇಕಲ್ಲವೇ ಎಂದು ಕೇಳಬೇಡಿ. ‘ಸಾಮರ್ಥ್ಯ’ ಎಂಬುದು ಗಗನಾ ಅವರು ನಾಯಕಿಯಾಗಿ ನಟಿಸುತ್ತಿರುವ ಮೊದಲ ಸಿನಿಮಾದ ಹೆಸರು.

ಎಚ್. ವಾಸು ನಿರ್ದೇಶನದ ಈ ಸಿನಿಮಾ ಒಂದು ಪ್ರೇಮಕಥೆಯನ್ನೇ ಒಳಗೊಂಡಿದೆ. ಆದರೆ ಅದು ಈಗಾಗಲೇ ಸಿನಿಮಾಗಳಲ್ಲಿ ಬಂದುಹೋಗಿರುವ ಪ್ರೇಮಕಥೆಗಿಂತ ಭಿನ್ನವಾಗಿದೆಯಂತೆ. ಅಷ್ಟೇ ಅಲ್ಲ, ಅದು ಈಗಿನ ಕಾಲದ ಹರೆಯದವರು ಪ್ರೇಮವನ್ನು ಹೇಗೆ ನೋಡುತ್ತಾರೆ ಎಂಬ ದೃಷ್ಟಿಕೋನವನ್ನೇ ಮುಖ್ಯವಾಗಿರಿಸಿಕೊಂಡಿದೆಯಂತೆ. ಹಾಗಾಗಿಯೇ ಗಗನ ಅವರಿಗೆ ಇದು ಆಪ್ತವಾಗಿದ್ದು.

‘ನನ್ನದು ಈ ಸಿನಿಮಾದಲ್ಲಿ ಜೋಯಲ್ ಗುಣದ ಹುಡುಗಿ ಪಾತ್ರ. ಖುಷಿ ಖುಷಿಯಾಗಿರ್ತಾಳೆ. ಏನೇ ಕಷ್ಟ ಬಂದರೂ ನಗುನಗುತ್ತಲೇ ಎದುರಿಸಿಕೊಂಡು ಹೋಗುವ ಹುಡುಗಿ ಅವಳು’ ಎಂದು ಪಾತ್ರದ ಬಗ್ಗೆ ವಿವರಿಸುವ ಗಗನಾ, ‘ಈ ಸಿನಿಮಾದಿಂದ ನಾನು ಸಾಕಷ್ಟು ಸಂಗತಿಗಳನ್ನು ಕಲಿತಿದ್ದೇನೆ. ಸಿನಿಮಾ ಕುರಿತಾದ ಪಾಠದ ಜೊತೆಗೆ ಒಂದು ತಂಡವಾಗಿ ಹೇಗೆ ಕೆಲಸ ಮಾಡಬೇಕು ಎಂಬುದನ್ನೂ ಕಲಿತಿದ್ದೇನೆ’ ಎಂದು ಹೇಳುವುದನ್ನು ಮರೆಯುವುದಿಲ್ಲ.

ಪ್ರತಿಭೆಯನ್ನು ಒರೆಗೆ ಹಚ್ಚುವ, ತಮ್ಮೊಳಗಿನ ಕಲಾವಿದೆಗೆ ಸವಾಲು ಹಾಕುವಂಥ ಪಾತ್ರಗಳ ಮೂಲಕವೇ ವೃತ್ತಿಬದುಕನ್ನು ಕಟ್ಟಿಕೊಳ್ಳಬೇಕು ಎನ್ನುವುದು ಅವರ ಬಯಕೆ.

ಈಗಾಗಲೇ ಇನ್ನೂ ಎರಡು ಸಿನಿಮಾಗಳಲ್ಲಿ ಗಗನಾ ನಟಿಸುತ್ತಿದ್ದು ಯುಗಾದಿ ನಂತರ ಆ ಸಿನಿಮಾಗಳು ಪ್ರಾರಂಭವಾಗಲಿವೆಯಂತೆ.

‘ಸಾಮರ್ಥ್ಯ’ ಸಿನಿಮಾ ಕೂಡ ಬಿಡುಗಡೆಗೆ ಸಜ್ಜಾಗಿದ್ದು ಮುಂದಿನ ತಿಂಗಳು ತೆರೆಗೆ ತರಲು ಚಿತ್ರತಂಡ ಸಜ್ಜುಗೊಂಡಿದೆ. ■

# ಬಿಡುಗಡೆಯ ದಾರಿಯಲ್ಲಿ ‘ಕಸ್ತೂರಿ ಮಹಲ್’

ಹೆಸರಿನಿಂದಲೇ ಸಣ್ಣಮಟ್ಟದ ವಿವಾದವೆಬ್ಬಿಸಿದ್ದ ಸಿನಿಮಾ ‘ಕಸ್ತೂರಿ ಮಹಲ್’. ಮೊದಲಿಗೆ ಈ ಸಿನಿಮಾ ಹೆಸರು ‘ಕಸ್ತೂರಿ ನಿವಾಸ’ ಎಂದಿತ್ತು. ಅದು ವಿವಾದಕ್ಕೆ ಕಾರಣವೂ ಆಗಿತ್ತು. ಆಗ ಈ ಸಿನಿಮಾದಲ್ಲಿ ರಚಿತಾ ರಾಮ್ ನಟಿಸಲಿದ್ದಾರೆ ಎಂದು ಚಿತ್ರತಂಡವೇ ಘೋಷಿಸಿತ್ತು. ನಂತರ ಅದರ ಹೆಸರು ‘ಕಸ್ತೂರಿ ಮಹಲ್’ ಎಂದಾಯಿತು. ಜೊತೆಗೆ ಸಿನಿಮಾದ ನಾಯಕಿಯೂ ಬದಲಾದರು. ರಚಿತಾ ಜಾಗಕ್ಕೆ ಶಾನ್ವಿ ಶ್ರೀವಾಸ್ತವ್ ಬಂದರು.

ದಿನೇಶ್ ಬಾಬು ನಿರ್ದೇಶನದ 50ನೇ ಸಿನಿಮಾ ಎಂಬುದು ಈ ಸಿನಿಮಾಗೆ ಇರುವ ಅಗ್ಗಳಿಕೆ. ಈಗಾಗಲೇ ಚಿತ್ರ ಪೂರ್ಣಗೊಂಡಿದ್ದು, ಸೆನ್ಸಾರ್ ಮಂಡಳಿಯೂ ಸಿನಿಮಾವನ್ನು ವೀಕ್ಷಿಸಿದೆ.

ಮೇ ತಿಂಗಳಲ್ಲಿ ‘ಕಸ್ತೂರಿ ಮಹಲ್’ನ ಸೊಬಗನ್ನು ಪ್ರೇಕ್ಷಕರಿಗೆ ಉಣಿಸುವ ಯೋಚನೆಯಲ್ಲಿ ಚಿತ್ರತಂಡವಿದೆ. ಅದಕ್ಕೆ ಶುಭ ಸೂಚನೆ ಎಂಬ ಹಾಗೆ ಚಿತ್ರದ ಡಿಜಿಟಲ್ ಹಕ್ಕು ದೊಡ್ಡ ಮೊತ್ತಕ್ಕೆ ಮಾರಾಟವಾಗಿದೆ, ಪ್ರತಿಷ್ಠಿತ ಸಂಸ್ಥೆಯೊಂದು ಅದನ್ನು ಖರೀದಿಸಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಶಾನ್ವಿ ಜೊತೆಗೆ ಸ್ಕಂಧ ಅಶೋಕ್, ರಂಗಾಯಣ ರಘು, ಶ್ರುತಿ ಪ್ರಕಾಶ್, ನೀನಾಸಂ ಅಶ್ವತ್ಥ್ ಮುಂತಾದವರು ತಾರಾಗಣದಲ್ಲಿದ್ದಾರೆ. ಪಿ.ಕೆ.ಎಚ್. ದಾಸ್ ಅವರ ಛಾಯಾಗ್ರಹಣ ಮತ್ತು ಹರೀಶ್ ಕೃಷ್ಣ ಅವರ ಸಂಗೀತ ಈ ಸಿನಿಮಾಗಿದೆ. ■

